# ದಿನಾಂಕ: 14-07-2010ರಂದು ಅಪರಾಹ್ನ: 03-00ಗಂಟೆಗೆ ಹೇಮಾವತಿ ಸಭಾಂಗಣ, ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ನಡೆದ ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯ ನಡವಳಿಗಳು

**ಅಧ್ಯಕ್ಷತೆ: ಶ್ರೀಮತಿ ಕಾಮಾಕ್ಷಿರಾಜು**

**ಅಧ್ಯಕ್ಷರು,**

**ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ**

ಹಾಜರಿ: 07 | ಗೈರು ಹಾಜರಿ: 00

| ಕ್ರಸಂ | ವಿಷಯ | ಚರ್ಚೆ | ತೀರ್ಮಾನ |
|---|---|---|---|
| | | ಯೋಜನಾ ನಿರ್ದೇಶಕರು, ಡಿ.ಆರ್.ಡಿ.ಎ. ಇವರು ಸಭೆಗೆ ಹಾಜರಿದ್ದ ಮಾನ್ಯ ಸಮಿತಿ ಅಧ್ಯಕ್ಷರು, ಸದಸ್ಯರು, ಮುಖ್ಯ ಲೆಕ್ಕಾಧಿಕಾರಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಯವರನ್ನು ಸ್ವಾಗತಿಸುತ್ತಾ, ಅಧ್ಯಕ್ಷತೆ ವಹಿಸಿ ಸಭೆಯನ್ನು ನಡೆಸಿಕೊಡಬೇಕೆಂದು ಮಾನ್ಯ ಸಮಿತಿ ಅಧ್ಯಕ್ಷರನ್ನು ಕೋರಿದರು. | |
| 1 | ಮಾರ್ಚ್ 2010 ಏಪ್ರಿಲ್ 2010ರ ಮಾಹೆಯ ಮಾಸಿಕ ಲೆಕ್ಕ ಅನುಮೋದನೆಗೆ | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆರ್ಥಿಕ/ ಸಂಕಲನ/ ಮಾಸಿಕ ಲೆಕ್ಕ-1/2010-11 ದಿನಾಂಕ: 06-07-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಮುಖ್ಯ ಲೆಕ್ಕಾಧಿಕಾರಿಯವರು ಪ್ರಸ್ತಾಪಿಸುತ್ತಾ, ಜಿಲ್ಲಾ ಪಂಚಾಯಿತಿ ಹಾಸನದ ಮಾರ್ಚ್ 2010, ಏಪ್ರಿಲ್ 2010ರ ಮಾಹೆಯ ಜಮಾ ಮತ್ತು ಖರ್ಚಿನ ತ:ಖ್ತೆಗಳು ಚಲನ್ ಮತ್ತು ಓಚರ್ ಗಳು ಸ್ವೀಕೃತವಾಗಿರುತ್ತದೆ. ಖಜಾನೆಯಿಂದ ಸ್ವೀಕೃತವಾದ ಒಟ್ಟು ಜಮೆ ಮತ್ತು ಖರ್ಚಿನ ವಿವರಗಳನ್ನು ಪ್ರಧಾನ ಲೆಕ್ಕ ಶೀರ್ಷಿಕೆವಾರು ಸಂಕಲನ ಗಣಕೀಕರಣದಲ್ಲಿ ತಯಾರಿಸಲಾಗಿದೆ. ಸದರಿ ಸಂಕಲನದ ತ:ಖ್ತೆಯ ವಿವರ ರಾಜಸ್ವ ಜಮೆ ವೆಚ್ಚ ಮತ್ತು ಜಮಾ ಶೀರ್ಷಿಕೆಗಳ ಲೆಕ್ಕ, ಜಿಲ್ಲಾ ಪಂಚಾಯಿತಿಯ ಒಟ್ಟು ಜಮಾ ಮತ್ತು ಖರ್ಚಿನ ವಿವರ ಕೆಳಗಿನಂತಿದೆ. ಮಾರ್ಚ್ 2010 ಏಪ್ರಿಲ್ 2010ರ ಮಾಸಿಕ ಲೆಕ್ಕ ವಿವರ ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಅನುಮೋದನೆ ನೀಡಲು ಮಂಡಿಸಿದೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಮಾನ್ಯ ಸದಸ್ಯರುಗಳು ಪ್ರಸ್ತಾಪಿಸಿರುವ ವಿಷಯಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಅಗತ್ಯ ಕ್ರಮ ವಹಿಸಬೇಕೆಂದು ತಿಳಿಸಲಾಯಿತು.<br>ಮುಖ್ಯ ಲೆಕ್ಕಾಧಿಕಾರಿಯವರು ಕೋರಿರುವಂತೆ ಜಿಲ್ಲಾ ಪಂಚಾಯಿತಿ ಹಾಸನದ ಮಾರ್ಚ್ 2010, ಏಪ್ರಿಲ್ 2010ರ ಮಾಹೆಯ ಜಮಾ ಮತ್ತು ಖರ್ಚಿನ ತ:ಖ್ತೆ ರಾಜಸ್ವ ಜಮೆ ವೆಚ್ಚ ಮತ್ತು ಜಮಾ ಶೀರ್ಷಿಕೆಗಳ ಲೆಕ್ಕ, ಜಿಲ್ಲಾ ಪಂಚಾಯಿತಿಯ ಒಟ್ಟು ಜಮಾ ಮತ್ತು ಖರ್ಚಿನ ವಿವರಗಳಿಗೆ |

| ವಿವರ | ಮಾರ್ಚ್ 2010 | ಏಪ್ರಿಲ್ 2010 |
|---|---|---|
| ಜಮೆ | 17657736 | 321253012 |
| ಖರ್ಚು | 351558832 | 40037663 |

ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್.ಕುಮಾರಸ್ವಾಮಿರವರು ಮಾತನಾಡುತ್ತಾ, 2009-10ನೇ ಸಾಲಿನಲ್ಲಿ 31-03-2010ರ ಅಂತ್ಯಕ್ಕೆ ಖರ್ಚಾಗದೆ ವ್ಯಪಗತವಾಗಿರುವ ಅನುದಾನದ ವಿವರಗಳನ್ನು ನೀಡಬೇಕೆಂದು ಕೋರಿದರು.

ಮಾನ್ಯ ಸಮಿತಿ ಸದಸ್ಯರುಗಳು ಮಾತನಾಡುತ್ತಾ, 12ನೇ ಹಣಕಾಸು ಯೋಜನೆಯಡಿ ಅನುದಾನದ ಬಗ್ಗೆ ವಿವರಗಳನ್ನು ನೀಡಬೇಕೆಂದು ಕೋರಿದರು.

ಮುಖ್ಯ ಲೆಕ್ಕಾಧಿಕಾರಿಯವರು ಮಾತನಾಡುತ್ತಾ, ಹಾಸನ ಜಿಲ್ಲಾ ಪಂಚಾಯಿತಿಯ ಎರಡೂ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳಿಗೆ ರೂ.355.00ಲಕ್ಷಗಳ ಅನುದಾನ ಬಿಡುಗಡೆಯಾಗಬೇಕಾಗಿರುತ್ತದೆ ಎಂದು ಸಭೆಗೆ ವಿವರ ನೀಡಿದರು. ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ಸಂಬಂಧಪಟ್ಟ ಇಲಾಖೆಗಳಿಗೆ ಬಿಡುಗಡೆ ಮಾಡಲಾಗುತ್ತದೆ. 2009-10ನೇ ಸಾಲಿಗೆ ನಿಗದಿಪಡಿಸಿದ್ದ ಅನುದಾನವನ್ನು ವಿನಿಯೋಗಿಸಿರುವ ಬಗ್ಗೆ ಇಲಾಖೆಗಳಿಂದ ಮಾಹಿತಿಯನ್ನು ನೀಡಬೇಕಾಗಿರುತ್ತದೆ ಎಂದು ಸಭೆಗೆ ವಿವರ ನೀಡಿದರು.

ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್.ಕುಮಾರಸ್ವಾಮಿರವರು ಮಾತನಾಡುತ್ತಾ, ರೈತರಿಗೆ ರಸಗೊಬ್ಬರವನ್ನು ಸಮರ್ಪಕವಾಗಿ ವಿತರಣೆ ಮಾಡುತ್ತಿಲ್ಲ. ಪೆಬ್ರವರಿ ಮಾಹೆಯಲ್ಲಿಯೇ ಫೆಡರೇಷನ್ನಿಗೆ ರಸಗೊಬ್ಬರವು ಬಂದಿದ್ದರೂ ಸಹ ಜೂನ್ ಮಾಹೆಯಲ್ಲಿ ಸಹಕಾರ ಸಂಘಗಳ ಮೂಲಕ ವಿತರಣೆ ಮಾಡುತ್ತಿದ್ದಾರೆ. ಇದರಿಂದ, ಕೃತಕವಾಗಿ ರಸಗೊಬ್ಬರದ ಅಭಾವವನ್ನು ಸೃಷ್ಟಿ ಮಾಡಲಾಗಿರುತ್ತದೆ. ಅಲ್ಲದೆ, ಪ್ಲಾಂಟೇಷನ್ ಪ್ರದೇಶಗಳಿಗೆ ಡಿ.ಎ.ಪಿ ಯನ್ನು ಸಾಕಷ್ಟು ಪ್ರಮಾಣದಲ್ಲಿ ಸರಬರಾಜು ಮಾಡುತ್ತಿಲ್ಲ. ಈ ಬಗ್ಗೆ ಅಗತ್ಯ ಕ್ರಮ ವಹಿಸಬೇಕೆಂದು ಕೋರಿದರು.

ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

| ವಿವರ | ಮಾರ್ಚ್ 2010 | ಏಪ್ರಿಲ್ 2010 |
|---|---|---|
| ಜಮೆ | 17657736 | 321253012 |
| ಖರ್ಚು | 351558832 | 40037663 |

| | | | |
|---|---|---|---|
| | | ಮಾನ್ಯ ಸದಸ್ಯರಾದ ಶ್ರೀಮತಿ ಪ್ರೇಮಾ ನಿಂಗಪ್ಪರವರು ಪ್ರಸ್ತಾಪಿಸುತ್ತಾ, 2009-10ನೇ ಸಾಲಿನಲ್ಲಿ ಕೃಷಿ ಇಲಾಖೆಯ ಕಟ್ಟಡ ಯೋಜನೆಯಡಿ ಶಾಂತಿಗ್ರಾಮದ ಕೃಷಿ ವಿಜ್ಞಾನ ಕಾಲೇಜು ಆವರಣದಲ್ಲಿ ರೈತ ಭವನ ನಿರ್ಮಾಣಕ್ಕಾಗಿ ಅನುದಾನವನ್ನು ನಿಗದಿಪಡಿಸಲಾಗಿತ್ತು. ಕಾಮಗಾರಿಯನ್ನು ಅನುಷ್ಠಾನ ಮಾಡಿರುವ ಬಗ್ಗೆ ವಿವರಗಳನ್ನು ನೀಡುವಂತೆ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಇವರಿಗೆ ತಿಳಿಸಿದರು.<br>ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಉತ್ತರಿಸುತ್ತಾ, ಅನುದಾನ ಮಾರ್ಚ್ ಅಂತ್ಯಕ್ಕೆ ಬಿಡುಗಡೆಯಾದ್ದರಿಂದ, ಪೂರ್ಣ ಪ್ರಮಾಣದಲ್ಲಿ ಅನುದಾನವನ್ನು ವಿನಿಯೋಗಿಸಲು ಸಾಧ್ಯವಾಗಿರುವುದಿಲ್ಲ ಮತ್ತು ಕಟ್ಟಡ ಕಾಮಗಾರಿಯು ಅಪೂರ್ಣಗೊಂಡಿರುತ್ತದೆ. ಆದ್ದರಿಂದ, 2010-11ನೇ ಸಾಲಿನಲ್ಲಿ ಕೃಷಿ ಇಲಾಖೆಯ ಕಟ್ಟಡ ಯೋಜನೆಯಡಿಯಲ್ಲಿ ನಿಗದಿಪಡಿಸಿರುವ ಅನುದಾನದಲ್ಲಿ ಕಳೆದ ಸಾಲಿನಲ್ಲಿ ಪ್ರಾರಂಭ ಮಾಡಿರುವ ರೈತ ಭವನ ನಿರ್ಮಾಣದ ಕಾಮಗಾರಿಗೆ ಅವಶ್ಯವಿರುವ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ಕೋರಿದರು.<br>ಮಾನ್ಯ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರು ಕೃಷಿ ಇಲಾಖೆಯ ಕಟ್ಟಡ ಯೋಜನೆಯಡಿ ನಿಗದಿಪಡಿಸಿರುವ ಅನುದಾನದಲ್ಲಿ ಶಾಂತಿಗ್ರಾಮದ ಕೃಷಿ ವಿಜ್ಞಾನ ಕಾಲೇಜು ಆವರಣದಲ್ಲಿ ರೈತ ಭವನ ನಿರ್ಮಾಣದ ಮುಂದುವರೆದ ಕಾಮಗಾರಿಗೆ ಅವಶ್ಯವಿರುವ ಅನುದಾನವನ್ನು ತೆಗೆದಿರಿಸಿ ಬಾಕಿ ಉಳಿಕೆ ಅನುದಾನಕ್ಕೆ ಕ್ರಿಯಾ ಯೋಜನೆಯನ್ನು ಸಿದ್ದಪಡಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.<br>ಜಂಟಿ ಕೃಷಿ ನಿರ್ದೇಶಕರು ಉತ್ತರಿಸುತ್ತಾ, ಸಹಕಾರ ಸಂಘಗಳ ಬೇಡಿಕೆಗನುಗುಣವಾಗಿ ರಸಗೊಬ್ಬರಗಳನ್ನು ಸರಬರಾಜು ಮಾಡಲಾಗುತ್ತಿದೆ ಎಂದು ಸಭೆಯ ಗಮನಕ್ಕೆ ತಂದರು.<br>ಮಾನ್ಯ ಜಿಲ್ಲಾ ಪಂಚಾಯಿತಿ ಉಪಾಧ್ಯಕ್ಷರು ಮಾತನಾಡುತ್ತಾ, ಜಿಲ್ಲೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಚಿಕೂನ್ ಗೂನ್ಯಾ ರೋಗ ಮತ್ತು ಡೆಂಗ್ಯೂ ಜ್ವರ ರೋಗಗಳು ಕಂಡುಬಂದಿದ್ದು, | |

ಇಬ್ಬರು ಡೆಂಗ್ಯೂ ಜ್ವರದಿಂದ ಮರಣ ಹೊಂದಿರುತ್ತಾರೆ. ಆದ್ದರಿಂದ, ಚಿಕೂನ್ಯ ಗೂನ್ಯಾ ಮತ್ತು ಡೆಂಗ್ಯೂ ಜ್ವರ ರೋಗಗಳ ನಿಯಂತ್ರಣದ ಬಗ್ಗೆ ಕ್ರಮ ವಹಿಸಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರಿಗೆ ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಉತ್ತರಿಸುತ್ತಾ, ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಯೋಜನೆಗಳ ಹತ್ತಿರ ನೀರು ಹರಿದು ಹೋಗುವಂತಹ ವ್ಯವಸ್ಥೆಯನ್ನು ಮಾಡಿರುವುದಿಲ್ಲ. ನೀರು ನಿಲ್ಲುವ ಸ್ಥಳಗಳಲ್ಲಿ ಸೊಳ್ಳೆಗಳು ಹೆಚ್ಚಾಗುತ್ತವೆ. ಈ ಕುರಿತಂತೆ, ಗ್ರಾಮೀಣ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ ವತಿಯಿಂದ ಸೊಳ್ಳೆಗಳ ನಿಯಂತ್ರಣದ ಬಗ್ಗೆ ಕ್ರಮ ವಹಿಸಲಾಗುತ್ತಿದೆ. ಬ್ಲೀಚಿಂಗ್ ಪೌಡರ್ ಫೆನಾಯಿಲ್ ಮೊದಲಾದವುಗಳನ್ನು ಬಳಸಿ ಲಾರ್ವಾ ಹಂತದಲ್ಲಿರುವಾಗಲೇ ಸೊಳ್ಳೆಗಳನ್ನು ನಾಶ ಮಾಡಲು ಕ್ರಮ ವಹಿಸಲಾಗುತ್ತಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಮಾನ್ಯ ಸಮಿತಿ ಅಧ್ಯಕ್ಷರು ಮಾತನಾಡುತ್ತಾ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಅವಶ್ಯವಿರುವ ಗ್ರೂಪ್-ಡಿ ನೌಕರರನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಕ್ರಮ ವಹಿಸಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರಿಗೆ ಸೂಚಿಸಿದರು.

ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್.ಕುಮಾರಸ್ವಾಮಿರವರು ಮಾತನಾಡುತ್ತಾ, ಕೆ.ಹೆಚ್.ಎಸ್.ಡಿ.ಪಿ ವತಿಯಿಂದ ಜಿಲ್ಲೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ದುರಸ್ಥಿಯನ್ನು ಮಾಡುತ್ತಿದ್ದಾರೆ. ಆದರೆ ಸಮರ್ಪಕವಾಗಿ ದುರಸ್ಥಿ ಮಾಡುತ್ತಿಲ್ಲವೆಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಸದಸ್ಯರಾದ ಶ್ರೀ ಹುಚ್ಚೇಗೌಡರವರು ಮಾತನಾಡುತ್ತಾ, ಆರೋಗ್ಯ ರಕ್ಷಾ ಸಮಿತಿಗೆ ಬಿಡುಗಡೆ ಮಾಡಿರುವ ಅನುದಾನದಲ್ಲಿ ಆಸ್ಪತ್ರೆಗಳಿಗೆ ಅವಶ್ಯವಿರುವ ದುರಸ್ಥಿಯನ್ನು ಮಾಡಿಸಲು ಕ್ರಮ ವಹಿಸಬೇಕೆಂದು ತಿಳಿಸಿದರು.

ಪಶು ಸಂಗೋಪನೆ ಇಲಾಖೆಯಡಿ ಸಕಲೇಶಪುರ ತಾಲ್ಲೂಕು ಹೆತ್ತೂರು, ಅರಕಲಗೂಡು ತಾಲ್ಲೂಕು ಮುಗಳೂರು ಮತ್ತು ಆಲೂರು ತಾಲ್ಲೂಕು ಭರತೂರು ಗ್ರಾಮಗಳಿಗೆ ಮಂಜೂರಾಗಿರುವ RIDF ಕಟ್ಟಡಗಳ ಕಾಮಗಾರಿಗಳು ಪೂರ್ಣಗೊಂಡಿರುವುದಿಲ್ಲ. ಈ ಬಗ್ಗೆ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ

ಮತ್ತು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಉಪನಿರ್ದೇಶಕರು, ಪಶುಪಾಲನಾ ಇಲಾಖೆ, ಹಾಸನ ಇವರು ಪರಿಶೀಲಿಸಿ ಕ್ರಮ ವಹಿಸಬೇಕೆಂದು ತಿಳಿಸಲಾಯಿತು.

ಸಾಮಾಜಿಕ ಅರಣ್ಯ ವಿಭಾಗದಿಂದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಬೆಳೆಸಿರುವ ಸಸಿಗಳನ್ನು ಗುಂಡಿಗಳನ್ನು ತೋಡಿಕೊಳ್ಳುವ ರೈತರಿಗೆ ಮಾತ್ರ ವಿತರಿಸಲು ಕ್ರಮ ವಹಿಸಬೇಕೆಂದು ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಹಾಸನ ಇವರಿಗೆ ತಿಳಿಸಲಾಯಿತು.

ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್.ಕುಮಾರಸ್ವಾಮಿರವರು ಮಾತನಾಡುತ್ತಾ, ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ಟ್ಯೂಷನ್ ಮಾಡಲು ಅನುದಾನ ನಿಗದಿಪಡಿಸಲಾಗಿರುತ್ತದೆ. ಆದರೆ, ಟ್ಯೂಷನ್ ಮಾಡುತ್ತಿಲ್ಲ. ಈ ಬಗ್ಗೆ ಪರಿಶೀಲಿಸಬೇಕೆಂದು ಕೋರಿದರು. ಮತ್ತು ಬಾಲಕರ ವಿದ್ಯಾರ್ಥಿನಿಲಯಗಳಲ್ಲಿ ರಾತ್ರಿ ವೇಳೆಯಲ್ಲಿ ವಿದ್ಯಾರ್ಥಿಗಳು ಒಬ್ಬರಿಗೊಬ್ಬರು ಜಗಳ ವಾಡುತ್ತಾರೆ. ಆದ್ದರಿಂದ ವಿದ್ಯಾರ್ಥಿನಿಲಯಗಳಲ್ಲಿ ಖಾಯಂ ನೌಕರರು ಉಳಿಯುವಂತೆ ನಿರ್ದೇಶನ ನೀಡ ಬೇಕೆಂದು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಮತ್ತು ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆ, ಹಾಸನ ಇವರಿಗೆ ತಿಳಿಸಿದರು.

ಮಾನ್ಯ ಅಧ್ಯಕ್ಷರು ಮಾತನಾಡುತ್ತಾ, ಕೃಷಿ ಇಲಾಖೆಯ ವತಿಯಿಂದ ರಿಯಾಯಿತಿ ದರದಲ್ಲಿ ನೀಡಿರುವ ಯಂತ್ರೋಪಕರಣಗಳು ಉಪಯೋಗಿಸದಿದ್ದರೂ ಸಹ ಇಟ್ಟಲ್ಲಿಯೇ ಹಾಳಾ ಗಿರುತ್ತವೆ. ಆದ್ದರಿಂದ, ಸದರಿ ಯಂತ್ರೋಪಕರಣಗಳನ್ನು ನೀಡಿದ ಸಂಸ್ಥೆಯವರ ಮೇಲೆ ಕ್ರಮ ವಹಿಸಬೇಕೆಂದು ತಿಳಿಸಿದರು.

ಜಂಟಿ ಕೃಷಿ ನಿರ್ದೇಶಕರು ಉತ್ತರಿಸುತ್ತಾ, ಸಂಸ್ಥೆಯ ವಿವರವನ್ನು ನೀಡಿದಲ್ಲಿ ಯಂತ್ರದ ದುರಸ್ಥಿ ಮಾಡಿಕೊಡುವಂತೆ ನಿರ್ದೇಶನ ನೀಡಲು ಕ್ರಮ ವಹಿಸುವುದಾಗಿ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್.ಕುಮಾರಸ್ವಾಮಿರವರು ಮಾತನಾಡುತ್ತಾ, ತೋಟ ಗಾರಿಕೆ ಇಲಾಖೆಯ ವತಿಯಿಂದ ಅಂಗಾಂಶ ಬಾಳೆ ಬೆಳೆಗೆ ಮಾತ್ರ ಸಹಾಯಧನವನ್ನು

ನೀಡುತ್ತಿದ್ದಾರೆ. ಕಂದುಗಳಿಂದ ಬೆಳೆಯುವ ರೈತರಿಗೆ ಸಹಾಯಧನ ನೀಡುತ್ತಿಲ್ಲ. ಈ ಬಗ್ಗೆ ವಿವರ ನೀಡಬೇಕೆಂದು ಕೋರಿದರು.

ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಹಾಸನ ಇವರು ಉತ್ತರಿಸುತ್ತಾ, ಸರ್ಕಾರದ ಮಾರ್ಗಸೂಚಿಯಲ್ಲಿ ಅಂಗಾಂಶ ಬಾಳೆ ಬೆಳೆಯುವ ರೈತರಿಗೆ ಸಹಾಯಧನವನ್ನು ನೀಡುವಂತೆ ತಿಳಿಸಿರುತ್ತಾರೆ ಎಂದು ಸಭೆಗೆ ವಿವರ ನೀಡಿದರು.

ಮಾನ್ಯ ಸದಸ್ಯರಾದ ಶ್ರೀ ಹೆಚ್.ಅಣ್ಣಪ್ಪಶೆಟ್ಟಿರವರು ಮಾತನಾಡುತ್ತಾ, ಆಲೂಗೆಡ್ಡೆ ಬೆಳೆಗೆ ಯಾವ ಯಾವ ಔಷಧಿಗಳನ್ನು ಯಾವ ಯಾವ ಹಂತದಲ್ಲಿ ಸಿಂಪರಣೆ ಮಾಡಬೇಕು ಎಂಬ ಬಗ್ಗೆ ರೈತರಿಗೆ ಮಾಹಿತಿಯನ್ನು ಒದಗಿಸಲು ಕ್ರಮ ವಹಿಸಬೇಕೆಂದು ಮತ್ತು ಔಷದಿಗಳನ್ನು ಶೇ.50ರ ರಿಯಾಯಿತಿ ದರದಲ್ಲಿ ನೀಡಲು ಕ್ರಮ ವಹಿಸಬೇಕೆಂದು ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಹಾಸನ ಇವರಿಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್.ಕುಮಾರಸ್ವಾಮಿರವರು ಮಾತನಾಡುತ್ತಾ, ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಹಾನುಬಾಳು ಶಾಲೆಗೆ ರೂ.7000/- ಚೆಕ್ಕನ್ನು ಕ್ರೀಡಾ ಸಾಮಗ್ರಿಗಳನ್ನು ಖರೀದಿಸಲು ನೀಡಿದ್ದು, ಸದರಿ ಚೆಕ್ ಪಡೆಯಲು ರೂ.20.00ಗಳ ಛಾಪಾ ಕಾಗದವನ್ನು ನೀಡಬೇಕೆಂದು ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯವರು ತಿಳಿಸಿದ್ದರೂ ಸಹ ಮುಖ್ಯೋಪಾಧ್ಯಾಯರು ರೂ.20.00ಗಳ ಛಾಪಾ ಕಾಗದವನ್ನು ನೀಡಿರುವುದಿಲ್ಲ ಮತ್ತು ಜಿಲ್ಲೆಯಲ್ಲಿ ಶಾಲೆಗಳಲ್ಲಿರುವ ವಿದ್ಯಾರ್ಥಿಗಳಿಗನುಗುಣವಾಗಿ ಶಿಕ್ಷಕರು ಇಲ್ಲ. ಒಂದು ಶಾಲೆಯಲ್ಲಿ 130 ವಿದ್ಯಾರ್ಥಿಗಳಿದ್ದರೂ ಸಹ ಕೇವಲ ಇಬ್ಬರು ಶಿಕ್ಷಕರಿದ್ದಾರೆ. ಇನ್ನೊಂದು ಶಾಲೆಯಲ್ಲಿ ಕೇವಲ 15 ವಿದ್ಯಾರ್ಥಿಗಳಿಗೆ ಮೂವರು ಶಿಕ್ಷಕರಿದ್ದಾರೆ, ಆದ್ದರಿಂದ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಶಿಕ್ಷಕರನ್ನು ನಿಯೋಜನೆ ಮಾಡಲು ಪರಿಶೀಲಿಸಿ ಕ್ರಮ ವಹಿಸಬೇಕೆಂದು ಕೋರಿದರು ಹಾಗೂ ಸಕಲೇಶಪುರ ತಾಲ್ಲೂಕಿನಲ್ಲಿ 2009-10ನೇ ಸಾಲಿನಲ್ಲಿ ಪಠ್ಯಪುಸ್ತಕಗಳನ್ನು ಶಾಲೆಗಳಿಗೆ ಸಾಗಾಣೆ ಮಾಡಲು ಸರ್ಕಾರದಿಂದ ಅನುದಾನ ಬಿಡುಗಡೆಯಾಗಿದ್ದರೂ ಸಹ ಬಿ.ಆರ್.ಸಿ/ ಸಿ.ಆರ್.ಸಿ ಕೇಂದ್ರಗಳಿಂದ ಶಿಕ್ಷಕರುಗಳೇ ತಮ್ಮ

ಸ್ವಂತ ಖರ್ಚಿನಲ್ಲಿ ಪಠ್ಯಪುಸ್ತಕಗಳನ್ನು ಶಾಲೆಗೆ ತೆಗೆದುಕೊಂಡು ಹೋಗಿರುತ್ತಾರೆ. ಆದ್ದರಿಂದ ಶಿಕ್ಷಕರುಗಳು ಖರ್ಚು ಮಾಡಿರುವ ಹಣವನ್ನು ಅವರಿಗೆ ವಾಪಸ್ಸು ಮಾಡಲು ಕ್ರಮ ವಹಿಸಬೇಕೆAದು ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಹಾಸನ ಇವರಿಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಹೆಚ್.ಅಣ್ಣಪ್ಪಶೆಟ್ಟಿರವರು ಮಾತನಾಡುತ್ತಾ, ಅಗಲಹಳ್ಳಿ ಶಾಲೆಯಲ್ಲಿ ಶಿಕ್ಷಕಿಯು ನಿದ್ರೆಯನ್ನು ಮಾಡುತ್ತಾರೆ. ಈ ಬಗ್ಗೆ ತನಿಖೆ ನಡೆಸಿ ಸೂಕ್ತ ಕ್ರಮ ವಹಿಸಬೇಕೆಂದು ತಿಳಿಸಿದರು.

ಮಾನ್ಯ ಜಿಲ್ಲಾ ಪಂಚಾಯಿತಿ ಅಧ್ಯಕ್ಷರು ಮಾತನಾಡುತ್ತಾ, ಶಿಕ್ಷಣ ಇಲಾಖೆಯಲ್ಲಿ ವಿದ್ಯಾರ್ಥಿ ವೇತನ ಖರ್ಚಾಗಿರುವುದಿಲ್ಲ. ಈ ಬಗ್ಗೆ ವಿವರ ನೀಡುವಂತೆ ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡುತ್ತಾ, ಶಿಕ್ಷಕರುಗಳು ತಮ್ಮ ಸ್ವಂತ ಖರ್ಚಿನಲ್ಲಿಯೇ ಕ್ಲಸ್ಟರ್ ಗಳಿಂದ ಶಾಲೆಗಳಿಗೆ ಪಠ್ಯ ಪುಸ್ತಕಗಳನ್ನು ತೆಗೆದುಕೊಂಡು ಹೋಗಿದ್ದಲ್ಲಿ ಅಂತಹವರಿಗೆ ವೆಚ್ಚದ ಬಾಬ್ತನ್ನು ನೀಡಲು ಕ್ರಮ ವಹಿಸುವಂತೆ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಹಾಸನ ಇವರಿಗೆ ತಿಳಿಸಿದರು.

ಮಾನ್ಯ ಜಿಲ್ಲಾ ಪಂಚಾಯಿತಿ ಉಪಾಧ್ಯಕ್ಷರು ಮಾತನಾಡುತ್ತಾ, ಶಿಕ್ಷಣ ಇಲಾಖೆಯಡಿ ಬಿಸಿಯೂಟ ಕಾರ್ಯಕ್ರಮಕ್ಕೆ ತರಕಾರಿಯನ್ನು ಶಿಕ್ಷಕರುಗಳೇ ತಮ್ಮ ಸ್ವಂತ ಹಣ ನೀಡಿ ತೆಗೆದುಕೊಂಡು ಹೋಗುತ್ತಿದ್ದಾರೆ. ಆದ್ದರಿಂದ ತರಕಾರಿ ವೆಚ್ಚವನ್ನು ಹೆಚ್ಚು ಮಾಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.

ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಹಾಸನ ಇವರು ಉತ್ತರಿಸುತ್ತಾ, ಮಾನ್ಯ ಸದಸ್ಯರುಗಳು ಸಭೆಯಲ್ಲಿ ಪ್ರಸ್ತಾಪಿಸಿರುವ ವಿಷಯಗಳ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

| | | | |
|---|---|---|---|
| 2 | ಜಿಲ್ಲಾ ಪಂಚಾಯತ್ ಹಾಸನಕ್ಕೆ 2010-11ನೇ ಸಾಲಿನಲ್ಲಿ 30-06-2010ರ ಅಂತ್ಯದವರೆಗೆ ಆರ್ಥಿಕ ಇಲಾಖೆ/ ಗ್ರಾಮೀಣಾಭಿವೃದ್ಧಿ ಇಲಾಖೆ ಹಾಗೂ ಇತರೆ ಅನುದಾನಗಳ ಜಮೆ ವಿವರ | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆವ್ಯ: ಅಧೀ:1/4/ ಹಸ: ಟಿಪ್ಪಣಿ: /2010-11 ದಿನಾಂಕ: 09-07-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>. ಮುಖ್ಯ ಲೆಕ್ಕಾಧಿಕಾರಿಯವರು ಜಿಲ್ಲಾ ಪಂಚಾಯತ್ ಹಾಸನಕ್ಕೆ ಆರ್ಥಿಕ ಇಲಾಖೆಯಿಂದ ಲಿಂಕ್ ಡಾಕ್ಯುಮೆಂಟ್ ಅನುದಾನ/ ಇಲಾಖೆ ಅನುದಾನ/ ಹೆಚ್ಚುವರಿ ಅನುದಾನ/ ಕೇಂದ್ರ ಪುರಸ್ಕೃತ ಅನುದಾನಗಳು/ ರಸ್ತೆ ಅಭಿವೃದ್ಧಿ ಅನುದಾನ ಹಾಗೂ ಇತರೆ ಅನುದಾನಗಳು ಬಿಡುಗಡೆಯಾಗಿರುವ ಬಗ್ಗೆ ಸಭೆಯ ಅವಗಾಹನೆಗೆ ಸಲ್ಲಿಸಿದರು. | ಸಭೆಯು ಜಿಲ್ಲಾ ಪಂಚಾಯತ್ ಹಾಸನಕ್ಕೆ ಆರ್ಥಿಕ ಇಲಾಖೆಯಿಂದ ಲಿಂಕ್ ಡಾಕ್ಯುಮೆಂಟ್ ಅನುದಾನ/ ಇಲಾಖೆ ಅನುದಾನ/ ಹೆಚ್ಚುವರಿ ಅನುದಾನ/ ಕೇಂದ್ರ ಪುರಸ್ಕೃತ ಅನುದಾನಗಳು/ ರಸ್ತೆ ಅಭಿವೃದ್ಧಿ ಅನುದಾನ ಹಾಗೂ ಇತರೆ ಅನುದಾನಗಳು ಬಿಡುಗಡೆಯಾಗಿರುವ ಬಗ್ಗೆ ಸಭೆಯು ಅವಗಾಹಿಸಿತು. |
| 3 | 21ನೇ ರಾಷ್ಟ್ರೀಯ ವಿಕಲ ಚೇತನರ ಕ್ರಿಕೆಟ್ ಪಂದ್ಯಾವಳಿಗೆ ಹಾಜರಾಗಲು ಜಿಲ್ಲಾ ಪಂಚಾಯಿತ್ ನಿಂದ ಧನ ಸಹಾಯ ನೀಡುವ ಬಗ್ಗೆ | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆ(8) ವಂತಿಕೆ-259/2009-10 ದಿನಾಂಕ: 31-05-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಶ್ರೀ ಟಿ.ವಿ. ಸುಬ್ರಮಣಿ ಅಂಗವಿಕಲ ಕ್ರೀಡಾಪಟು, ಹಾಸನ ಇವರು ದಿನಾಂಕ: 21-03-2010ರಿಂದ 30-03-2010ರವರೆಗೆ ಉತ್ತರ ಪ್ರದೇಶದ ಲಕ್ನೋದಲ್ಲಿ 21ನೇ ರಾಷ್ಟ್ರೀಯ ವಿಕಲಚೇತನರ ಕ್ರಿಕೆಟ್ ಪಂದ್ಯಾವಳಿಗೆ ಆಯ್ಕೆಯಾಗಿದ್ದು, ಇವರು ಬಡ ಕುಟುಂಬದವರಾಗಿದ್ದು, ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಲು ಸಮವಸ್ತ್ರ, ಶೂ ಮತ್ತು ಪ್ರಯಾಣದ ವೆಚ್ಚ ಭರಿಸಲು ಆರ್ಥಿಕ ತೊಂದರೆಯಿರುವ ಕಾರಣ ಸದರಿ ಪಂದ್ಯಾವಳಿಯಲ್ಲಿ ಭಾಗವಹಿಸಲು ಜಿಲ್ಲಾ ಪಂಚಾಯಿತಿಯಿಂದ ಧನಸಹಾಯ ನೀಡುವಂತೆ ಮಾನ್ಯ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಿಗೆ ಮನವಿ ಸಲ್ಲಿಸಿರುತ್ತಾರೆ. ಮಾನ್ಯ ಜಿಲ್ಲಾ ಪಂಚಾಯಿತಿ ಅಧ್ಯಕ್ಷರು ಸದರಿ ಮನವಿಯ ಮೇಲೆ ರೂ.5000/-ಗಳ ವಂತಿಕೆಯನ್ನು ನೀಡಲು ಸೂಚಿಸಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಶ್ರೀ ಟಿ.ವಿ. ಸುಬ್ರಮಣಿ ಅಂಗವಿಕಲ ಕ್ರೀಡಾಪಟು, ಹಾಸನ ಇವರು ದಿನಾಂಕ: 21-03-2010ರಿಂದ 30-03-2010ರವರೆಗೆ ಉತ್ತರ ಪ್ರದೇಶದ ಲಕ್ನೋದಲ್ಲಿ 21ನೇ ರಾಷ್ಟ್ರೀಯ ವಿಕಲಚೇತನರ ಕ್ರಿಕೆಟ್ ಪಂದ್ಯಾವಳಿಗೆ ಹಾಜರಾಗಿರುವುದಕ್ಕೆ ಜಿಲ್ಲಾ ಪಂಚಾಯಿತಿಯಿಂದ ರೂ.5000/-(ರೂಪಾಯಿ ಐದು ಸಾವಿರ ಮಾತ್ರ)ಗಳ ಧನಸಹಾಯವನ್ನು ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 4 | ಅರಸೀಕೆರೆ ತಾಲ್ಲೂಕು ಅಮ್ಮನಹಟ್ಟಿಯಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಧನ ಸಹಾಯ ನೀಡುವ ಬಗ್ಗೆ | ಟಿಪ್ಪಣಿ ಸಂಖ್ಯೆ: ಆ(8) ವಂತಿಕೆ-47/2010-11 ದಿನಾಂಕ: 01-07-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಅಧ್ಯಕ್ಷರು, ಅಗ್ಗುಂದ ತಾಂಡ್ಯದ ಆರ್. ನಾಯ್ಕ್ ನಾಟ್ಯ ಸಂಘ( ರಿ) ಅರಸೀಕೆರೆ ತಾ: ಇವರು ದಿನಾಂಕ: 26-06-2010ರಂದು ಅರಸೀಕೆರೆ ತಾ: ಅಮ್ಮನಹಟ್ಟಿಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಸದರಿ ಕಾರ್ಯಕ್ರಮ ನಡೆಸಲು ಜಿಲ್ಲಾ ಪಂಚಾಯಿತಿಯಿಂದ ಧನಸಹಾಯ ನೀಡುವಂತೆ ಮಾನ್ಯ ಜಿಲ್ಲಾ ಪಂಚಾಯಿತಿ ಅಧ್ಯಕ್ಷರಿಗೆ | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಅಧ್ಯಕ್ಷರು, ಅಗ್ಗುಂದ ತಾಂಡ್ಯದ ಆರ್. ನಾಯ್ಕ್ ನಾಟ್ಯ ಸಂಘ (ರಿ) ಅರಸೀಕೆರೆ ತಾ: ಇವರು ಕೋರಿರುವಂತೆ ದಿನಾಂಕ: 26-06-2010ರಂದು ಅರಸೀಕೆರೆ ತಾ: ಅಮ್ಮನ ಹಟ್ಟಿಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿರುವುದಕ್ಕೆ ಅನುಕೂಲವಾಗುವಂತೆ ಜಿಲ್ಲಾ ಪಂಚಾಯಿತಿಯಿಂದ ರೂ.5000/-(ರೂಪಾಯಿ ಐದು ಸಾವಿರ ಮಾತ್ರ)ಗಳ ಧನಸಹಾಯವನ್ನು ನೀಡಲು ಸಭೆಯು |

<table>
<tr><td></td><td></td><td>ಮನವಿ ಸಲ್ಲಿಸಿರುತ್ತಾರೆ. ಮಾನ್ಯ ವಿಧಾನ ಸಭಾ ಸದಸ್ಯರು ಸಹ ಸಹಾಯಧನ ನೀಡುವಂತೆ ಕೋರಿರುತ್ತಾರೆ.</td><td>ಸರ್ವಾನುಮತದಿಂದ ತೀರ್ಮಾನಿಸಿತು.</td></tr>
<tr><td>5</td><td>31-03-2010ಕ್ಕೆ ಅಂತ್ಯಗೊಳ್ಳುವ ಸಿ ಅಂಡ್ ಎಜಿ ವರದಿಯಲ್ಲಿ ಸೇರಿಸಲು ಉದ್ದೇಶಿಸಿರುವ ಕರಡು ಟಿಪ್ಪಣಿ Non recovery of Extra Expenditure due to Resciding of work taken up under NABARD/ RIDF IX Rsf.18.04 lakhs. Executive Engineer- PRED, Hassan for the year 2006-07 ಕುರಿತಂತೆ</td><td>ಟಿಪ್ಪಣಿ ಸಂಖ್ಯೆ: ಜಿಪಂಹಾ/ಆರ್ಥಿಕ/ ಲೆಶಾ/ಸಿ ಅಂಡ್ ಎಜಿ/ ಕಟಿ-10/2010-11 ದಿನಾಂಕ: 09-07-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಜಿಲ್ಲಾ ಪಂಚಾಯಿತಿ ಇಂಜಿನಿಯರಿಂಗ್ ವಿಭಾಗ, ಹಾಸನ ಕಛೇರಿಗೆ ಸಂಬಂಧಪಟ್ಟಂತೆ 31-03-2010ಕ್ಕೆ ಅಂತ್ಯಗೊಳ್ಳುವ ಸಿ ಆಂಡ್ ಎಜಿ ವರದಿಯಲ್ಲಿ ಸೇರಿಸಲು ಉದ್ದೇಶಿಸಿರುವ ಕರಡು ಟಿಪ್ಪಣಿಗೆ ಮಹಾಲೇಖಪಾಲರು ಸರ್ಕಾರದ ಷರಾವನ್ನು ತಿಳಿಸುವಂತೆ ಕೋರಿದ್ದಾರೆ. ಆದ್ದರಿಂದ, ಸದರಿ ಟಿಪ್ಪಣಿಗೆ ಅನುಪಾಲನಾ ವರದಿಯನ್ನು ವಿಭಾಗ, ಕಛೇರಿಯಿಂದ ಸಿದ್ದಪಡಿಸಿ ಕಳುಹಿಸಿಕೊಟ್ಟಿದ್ದು, ಈ ಅನುಪಾಲನಾ ವರದಿಗೆ ಜಿಲ್ಲಾ ಪಂಚಾಯಿತಿಯ ಶಿಫಾರಸ್ಸಿನೊಂದಿಗೆ ಕಳುಹಿಸಿಕೊಡಲು ಹಣಕಾಸು ಮತ್ತು ಲೆಕ್ಕಪರಿಶೋಧನಾ ಹಾಗೂ ಯೋಜನಾ ಸ್ಥಾಯಿ ಸಮಿತಿಗೆ ಅನುಮೋದನೆಗೆ ಮಂಡಿಸಿದೆ.</td><td>ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಜಿಲ್ಲಾ ಪಂಚಾಯಿತಿ ಇಂಜಿನಿಯರಿಂಗ್ ವಿಭಾಗ, ಹಾಸನ ಕಛೇರಿಗೆ ಸಂಬಂಧಪಟ್ಟಂತೆ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್, ವಿಭಾಗ, ಹಾಸನ ಇವರು 31-03-2010ಕ್ಕೆ ಅಂತ್ಯಗೊಳ್ಳುವ ಸಿ ಆಂಡ್ ಎಜಿ ವರದಿಯಲ್ಲಿ ಸೇರಿಸಲು ಸಿದ್ದಪಡಿಸಿ ಸಲ್ಲಿಸಿರುವ ಕರಡು ಟಿಪ್ಪಣಿಯನ್ನು ಸರ್ಕಾರದ ಷರಾ ದೊಂದಿಗೆ ಮಹಾಲೇಖಪಾಲರು, ಕರ್ನಾಟಕ ಇವರಿಗೆ ಕಳುಹಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.</td></tr>
<tr><td></td><td></td><td></td><td></td></tr>
<tr><td>5</td><td>ಹಾಸನ ಜಿಲ್ಲಾ ಪಂಚಾಯಿತಿ ವಾಣಿಜ್ಯ ಮಳಿಗೆಗಳ ಬಿಡ್ಡುದಾರರಿಗೆ ಬಡ್ಡಿ ಹಣ ಪಾವತಿಸಲು ಕುರಿತು.</td><td>ಟಿಪ್ಪಣಿ ಸಂಖ್ಯೆ: ಜಿಪಂಹಾ/ಆಸಿ(6)ಜಿ.ಪಂ. ಕಟ್ಟಡ 99/2004-05 ದಿನಾಂಕ: 14-07-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಹಾಸನ ಜಿಲ್ಲಾ ಪಂಚಾಯಿತಿ ಕಟ್ಟಡದಲ್ಲಿ ನಿರ್ಮಿಸಿರುವ ವಾಣಿಜ್ಯ ಮಳಿಗೆಗಳನ್ನು ಬಿಡ್ಡುದಾರರಿಗೆ ನೀಡದೇ ಜಿಲ್ಲಾ ಪಂಚಾಯಿತಿ ಕಛೇರಿಯ ಆಡಳಿತ ಅವಶ್ಯಕತೆಗನುಸಾರ ಬಳಸಿಕೊಳ್ಳಲು ದಿನಾಂಕ: 21-07-2004ರ ಜಿಲ್ಲಾ ಪಂಚಾಯಿತಿ ಸಾಮಾನ್ಯ ಸ್ಥಾಯಿ ಸಮಿತಿ ಹಾಗೂ ದಿನಾಂಕ: 23-08-2004ರಂದು ನಡೆದ ಜಿಲ್ಲಾ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ನಿರ್ಣಯವಾಗಿರುತ್ತದೆ. ಸದರಿ ವಾಣಿಜ್ಯ ಮಳಿಗೆಗಳನ್ನು ಬಿಡ್ಡುದಾರರಿಗೆ ನೀಡದ ಕಾರಣ, ಕೆಲವು ಬಿಡ್ಡುದಾರರು ಘನ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ.<br>ಘನ ಉಚ್ಚ ನ್ಯಾಯಾಲಯವು ಬಿಡ್ಡು ಹಣದ ಮೇಲೆ ಶೇ.18ರಷ್ಟು ಬಡ್ಡಿ ಹಣವನ್ನು ಪಾವತಿಸಲು ಆದೇಶ ನೀಡಲಾಗಿತ್ತು. ನ್ಯಾಯಾಲಯದ ಆದೇಶದಂತೆ, ಶೇ.18ರಷ್ಟು ಬಡ್ಡಿ</td><td>ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಹಾಸನ ಜಿಲ್ಲಾ ಪಂಚಾಯಿತಿ ಕಟ್ಟಡದಲ್ಲಿ ನಿರ್ಮಿಸಿರುವ ವಾಣಿಜ್ಯ ಮಳಿಗೆಗಳ ಬಿಡ್ಡುದಾರರಿಗೆ ಘನ ಉಚ್ಚ ನ್ಯಾಯಾಲಯದ ಆದೇಶದಂತೆ ಶೇ.9ರಂತೆ ಬಡ್ಡಿಯನ್ನು ಬಿಡ್ಡು ಹಣದ ಮೇಲೆ ಕೆಳಕಂಡ ಬಿಡ್ಡುದಾರರಿಗೆ ಪಾವತಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.<br><u>ಬಿಡ್ಡುದಾರರ ವಿವರ</u>
<table>
<tr><th>ಕ್ರಸಂ</th><th>ಬಿಡ್ಡುದಾರರ ಹೆಸರು ಮತ್ತುವಿಳಾಸ</th><th>ಬಿಡ್ಡುದಾರರ ಠೇವಣಿ ಮೊತ್ತ (ರೂ.ಗಳಲ್ಲಿ)</th><th>ಶೇ.9ರಷ್ಟು ಬಡ್ಡಿ ಪಾವತಿಸ ಬೇಕಾದ ಮೊತ್ತ ( ರೂ.ಗಳಲ್ಲಿ )</th></tr>
<tr><td>1</td><td>ಶ್ರೀ ಪಿ.ಕೆ.ಬ್ರಹ್ಮಾನಂದ ಬಿನ್ ಕೃಷ್ಣ ಮಹದೇವ</td><td>3,10,000.00</td><td>1,53,740.96</td></tr>
</table>
</td></tr>
</table>

ನೀಡುವುದರಿಂದ, ಜಿಲ್ಲಾ ಪಂಚಾಯಿತಿಗೆ ಹೆಚ್ಚಿನ ಹೊರೆಯಾಗಿರುವುದರಿಂದ, ಸದರಿ ತೀರ್ಪಿನ ಕುರಿತು ಘನ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅಪೀಲ್ ಸಲ್ಲಿಸಲಾಗಿತ್ತು. ಘನ ಉಚ್ಚ ನ್ಯಾಯಾಲಯವು ಬಿಡ್ಡುದಾರರಿಗೆ ಶೇ.9ರಷ್ಟು ಬಡ್ಡಿಯನ್ನು ಬಿಡ್ಡು ಹಣದ ಮೇಲೆ ಪಾವತಿಸಲು ಆದೇಶಿಸಿರುತ್ತದೆ.

<u>ಬಿಡ್ಡುದಾರರ ವಿವರ ಕೆಳಕಂಡಂತಿದೆ.</u>

| ಕ್ರಸಂ | ಬಿಡ್ಡುದಾರರ ಹೆಸರು ಮತ್ತುವಿಳಾಸ | ಬಿಡ್ಡುದಾರರ ಠೇವಣಿ ಮೊತ್ತ (ರೂ.ಗಳಲ್ಲಿ) | ಶೇ.9ರಷ್ಟು ಬಡ್ಡಿ ಪಾವತಿಸಬೇಕಾದ ಮೊತ್ತ(ರೂ.ಗಳಲ್ಲಿ) |
|---|---|---|---|
| 1 | ಶ್ರೀ ಪಿ.ಕೆ.ಬ್ರಹ್ಮಾನಂದ ಬಿನ್ ಕೃಷ್ಣ ಮಹದೇವ ಪೈಯಾಡಿ, ಉತ್ತರ ಬಡಾವಣೆ , ಹಾಸನ | 3,10,000.00 | |
| 2 | ಶ್ರೀ ಹೆಚ್.ಎಸ್. ಗುರುಮೂರ್ತಿ ಬಿನ್ ಲೇ. ಸಣ್ಣಗಂಗಾಚಾರ್ ಆಜಾದ್ ರಸ್ತೆ, ಹಾಸನ | 3,10,000.00 | 1,50.847.40 |
| 3 | ಶ್ರೀ ಸಿ.ಎಂ. ಕರುಣಾಕರ ಬಿನ್ ಲೇ. ಮಲ್ಲಪ್ಪ, ಉಷಾ ಸೇಲ್ಸ್ ಸರ್ವೀಸಸ್, ಹಾಸನ | 4,77,000.00 | 2,31,335.00 |
| 4 | ಶ್ರೀ ಬಿ.ವಿ. ನಟರಾಜ ಬಿನ್ ಲೇ. ವೆಂಕಟಾಚಲಯ್ಯ, ರಿವರ್ ರೋಡ್, ಬೇಲೂರು | 2,26,000.00 | 96,695.51 |
| | ಒಟ್ಟು | 13,23,000.00 | 6,32,619.75 |

ಘನ ಉಚ್ಚ ನ್ಯಾಯಾಲಯದ ಆದೇಶದಂತೆ, ಮೇಲ್ಕಂಡ ಬಿಡ್ಡುದಾರರಿಗೆ ಶೇ.9ರಷ್ಟು ಬಡ್ಡಿ ಹಣ ರೂ.6,32,619.75( ಆರು ಲಕ್ಷದ ಮೂವತ್ತೆರಡು ಸಾವಿರದ ಆರುನೂರ ಹತ್ತೊಂಬತ್ತು ರೂಪಾಯಿ ಎಪ್ಪತ್ತೈದು ಪೈಸೆಗಳು ಮಾತ್ರ)ಗಳನ್ನು ಪಾವತಿಸಲು ವಿಷಯವನ್ನು ಜಿಲ್ಲಾ ಪಂಚಾಯಿತಿ ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಗೆ ಟಿಪ್ಪಣಿ ಮಂಡಿಸಿದೆ.

| | | | |
|---|---|---|---|
| | ಪೈಯಾಡಿ ಉತ್ತರ ಬಡಾವಣೆ , ಹಾಸನ | | |
| 2 | ಶ್ರೀ ಹೆಚ್.ಎಸ್. ಗುರು ಮೂರ್ತಿ ಬಿನ್ ಲೇ. ಸಣ್ಣಗಂಗಾಚಾರ್ ಆಜಾದ್ ರಸ್ತೆ, ಹಾಸನ | 3,10,000.00 | 1,50.847.40 |
| 3 | ಶ್ರೀ ಸಿ.ಎಂ. ಕರುಣಾಕರ ಬಿನ್ ಲೇ. ಮಲ್ಲಪ್ಪ ಉಷಾ ಸೇಲ್ಸ್ ಸರ್ವೀಸಸ್, ಹಾಸನ | 4,77,000.00 | 2,31,335.00 |
| 4 | ಶ್ರೀ ಬಿ.ವಿ. ನಟರಾಜ ಬಿನ್ ಲೇ. ವೆಂಕಟಾಚಲಯ್ಯ ರಿವರ್ ರೋಡ್, ಬೇಲೂರು | 2,26,000.00 | 96,695.51 |
| | ಒಟ್ಟು | 13,23,000.00 | 6,32,619.75 |

ಒಟ್ಟು ರೂ.6,32,619.75( ಆರು ಲಕ್ಷದ ಮೂವತ್ತೆರಡು ಸಾವಿರದ ಆರುನೂರ ಹತ್ತೊಂಬತ್ತು ರೂಪಾಯಿ ಎಪ್ಪತ್ತೈದು ಪೈಸೆಗಳು ಮಾತ್ರ)ಗಳು.

| | | | |
|---|---|---|---|
| | ಜಿಲ್ಲಾ ಪಂಚಾಯಿತಿ ವತಿಯಿಂದ ಧನ ಸಹಾಯ ನೀಡುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆ(8)ವಂತಿಕೆ-50/2010-11 ದಿನಾಂಕ: 12-07-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಹೇಮಾವತಿ ಪ್ರೌಢಶಾಲೆ, ಮಾನಸ ವಿದ್ಯಾ ಸಂಸ್ಥೆ, ಗೊರೂರು, ಹಾಸನ ತಾಲ್ಲೂಕು ಇವರು ದಿನಾಂಕ: 03-08-2010ರಿಂದ 04-08-2010ರವರೆಗೆ 2 ದಿನಗಳು ಹಾಸನ ನಗ್ರದ ಕ್ರೀಡಾಂಗಣದಲ್ಲಿ 2010ನೇ ಸಾಲಿನ ದಕ್ಷಿಣ ವಲಯದ ಕ್ರೀಡಾಕೂಟವನ್ನು ಏರ್ಪಡಿಸಿದ್ದು, ಈ ಕ್ರೀಡಾಕೂಟದಲ್ಲಿ 30 ಪ್ರೌಢಶಾಲೆಗಳಿಂದ ಸುಮಾರು 1500 ರಿಂದ 2000 ಭಾಗವಹಿಸಲಿದ್ದು, ಭಾಗವಹಿಸುವ ಮಕ್ಕಳಿಗೆ ಬಹುಮಾನ, ಮದ್ಯಾಹ್ನದ ಉಪಹಾರ ಹಾಗೂ ಇನ್ನಿತರ ವೆಚ್ಚಗಳನ್ನು ಭರಿಸಲು ಸುಮಾರು ರೂ.1.50ಲಕ್ಷಗಳ ಅವಶ್ಯಕತೆಯಿದೆ. ಆದ್ದರಿಂದ, ಸದರಿ ವೆಚ್ಚವನ್ನು ಭರಿಸಲು ಜಿಲ್ಲಾ ಪಂಚಾಯತ್ ವತಿಯಿಂದ ರೂ.50,000/-ಗಳ ಸಹಾಯಧನವನ್ನು ಕೊಡಿಸಿಕೊಡುವಂತೆ ಕೋರಿ, ಮಾನ್ಯ ಸದಸ್ಯರು, ಕಟ್ಟಾಯ ಕ್ಷೇತ್ರ, ಜಿಲ್ಲಾ ಪಂಚಾಯಿತಿ, ಹಾಸನ ಇವರು ಕೋರಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ಚರ್ಚಿಸಲಾಗಿ, ಖಾಸಗಿ ಶಾಲೆಗಳು ಆಯೋಜಿಸುವ ಕ್ರೀಡಾಕೂಟಗಳಿಗೆ ಜಿಲ್ಲಾ ಪಂಚಾಯಿತಿಯಿಂದ ಸಹಾಯಧನವನ್ನು ನೀಡಲು ಅವಕಾಶವಿಲ್ಲದಿರುವುದರಿಂದ, ಹಾಸನ ತಾಲ್ಲೂಕು, ಗೊರೂರು ಮಾನಸ ವಿದ್ಯಾ ಸಂಸ್ಥೆ, ಹೇಮಾವತಿ ಪ್ರೌಢಶಾಲೆ, ಇವರು ಏರ್ಪಡಿಸಿರುವ ಕ್ರೀಡಾಕೂಟಕ್ಕೆ ಸಹಾಯಧನವನ್ನು ನೀಡದಿರಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು** | | | |
| 1 | ಶ್ರೀ ಎ.ಹೆಚ್,ಅಬೂಬಕರ್, ಗುತ್ತಿಗೆ ದಾರರಿಗೆ ಹಣ ಪಾವತಿಸುವ ಬಗ್ಗೆ. | ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್. ಕುಮಾರಸ್ವಾಮಿರವರು ಮಾತನಾಡುತ್ತಾ ಶ್ರೀ ಎ.ಹೆಚ್,ಅಬೂಬಕರ್, ಗುತ್ತಿಗೆದಾರರು ಇವರು ಸಕಲೇಶಪುರ ತಾಲ್ಲೂಕು ರಕ್ಷಿದಿ ಮಾವಿನಹಳ್ಳಿ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ನಬಾರ್ಡ್ ಯೋಜನೆಯಡಿ ಅನುಷ್ಠಾನ ಮಾಡಿರುತ್ತಾರೆ. ರಸ್ತೆ ಕಾಮಗಾರಿಯನ್ನು ಉತ್ತಮ ರೀತಿಯಲ್ಲಿ ನಿರ್ಮಾಣ ಮಾಡಲಾಗಿದೆ. ಆದರೆ ಅವರಿಗೆ ರೂ.1.75 ಲಕ್ಷಗಳನ್ನು ಬಿಡುಗಡೆ ಮಾಡಿರುವುದಿಲ್ಲ. ಆಡಿಟ್ ಆಕ್ಷೇಪಣೆಯ ಅಂದಾಜು ಪಟ್ಟಿಯು ಸರಿಯಿರುವುದಿಲ್ಲವೆಂದು ಆಡಿಟ್ ಆಕ್ಷೇಪಣೆ ಮಾಡಿರುತ್ತಾರೆ. ಆದ್ದರಿಂದ ಆಡಿಟ್ ಆಕ್ಷೇಪಣೆಗೆ ಸಮರ್ಪಕ ಉತ್ತರಗಳೊಂದಿಗೆ ಆಡಿಟ್ ಆಕ್ಷೇಪಣೆಗಳನ್ನು ಕೈಬಿಡುವಂತೆ ಮಹಾಲೇಖಪಾಲರಿಗೆ ಪ್ರಸ್ತಾವನೆಯನ್ನು ಸಲ್ಲಿಸಿ ಶ್ರೀ ಎ.ಹೆಚ್,ಅಬೂಬಕರ್, ಗುತ್ತಿಗೆದಾರರಿಗೆ ತಡೆಹಿಡಿದಿರುವ ಹಣವನ್ನು ಬಿಡುಗಡೆ ಮಾಡಲು ಕ್ರಮ ವಹಿಸಬೇಕೆಂದು ಕೋರಿದರು. | ಸಭೆಯಲ್ಲಿ ವಿಷಯದ ಬಗ್ಗೆ ವಿವರಾಗಿ ಚರ್ಚಿಸಲಾಯಿತು.<br>ಸಕಲೇಶಪುರ ತಾ: ರಕ್ಷಿದಿ ಮಾವಿನಹಳ್ಳಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಂಬಂಧಿಸಿದಂತೆ, ಆಡಿಟ್ ಆಕ್ಷೇಪಣೆಗಳನ್ನು ತೆರವುಗೊಳಿಸುವ ಬಗ್ಗೆ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಇವರು ಕಾಮಗಾರಿಯನ್ನು ಪರಿಶೀಲಿಸಿ ಕಾಮಗಾರಿಯು ಸಮರ್ಪಕವಾಗಿ ಅನುಷ್ಠಾನ ಮಾಡಿರುವ ಬಗ್ಗೆ ಸೂಕ್ತ ವರದಿ ಯೊಂದಿಗೆ ಆಡಿಟ್ ಆಕ್ಷೇಪಣೆಗಳನ್ನು ಕೈಬಿಡುವಂತೆ ಮಹಾಲೇಖಪಾಲರಿಗೆ ಪ್ರಸ್ತಾವನೆಯನ್ನು ಸಲ್ಲಿಸಿ ಶ್ರೀ ಎ.ಹೆಚ್,ಅಬೂಬಕರ್, ಗುತ್ತಿಗೆ ದಾರರಿಗೆ ತಡೆಹಿಡಿದಿರುವ |

| | | | |
|---|---|---|---|
| | | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡುತ್ತಾ, ಆಡಿಟ್ ಆಕ್ಷೇಪಣೆಗಳು ಇದ್ದಲ್ಲಿ ಕಾಮಗಾರಿಯನ್ನು ಉತ್ತಮವಾಗಿ ಅನುಷ್ಠಾನ ಮಾಡಿರುತ್ತಾರೆಂದು ಉತ್ತರ ಸಲ್ಲಿಸಿ ಆಡಿಟ್ ಪ್ಯಾರಾದ ಆಕ್ಷೇಪಣೆಯನ್ನು ಕೈಬಿಡುವ ಬಗ್ಗೆ ಮಹಾಲೇಖಪಾಲರಿಗೆ ಪ್ರಸ್ತಾವನೆಯನ್ನು ಸಲ್ಲಿಸಿ ಶ್ರೀ, ಎ.ಹೆಚ್.ಅಬೂಬಕರ್, ಗುತ್ತಿಗೆದಾರರು ಅನುಷ್ಠಾನ ಮಾಡಿರುವ ರಕ್ಷಿದಿ ಮಾವಿನಹಳ್ಳಿ ರಸ್ತೆ ಅಭಿವೃದ್ಧಿ ಕಾಮಗಾರಿಯಲ್ಲಿ ತಡೆಹಿಡಿದಿರುವ ರೂ.1.75ಲಕ್ಷಗಳನ್ನು ಬಿಡುಗಡೆ ಮಾಡಲು ಕ್ರಮ ವಹಿಸಬೇಕೆಂದು ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಹಾಸನ ಇವರಿಗೆ ತಿಳಿಸಿದರು. | ರೂ.1.75 ಲಕ್ಷಗಳನ್ನು ಬಿಡುಗಡೆ ಮಾಡಲು ಅಗತ್ಯ ಕ್ರಮವಹಿಸಬೇಕೆಂದು ಸೂಚಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 2 | 16ನೇ ಏಷಿಯನ್ ಕ್ರೀಡಾ ಕೂಟದಲ್ಲಿ ಭಾಗವಹಿಸಲು ಧನಸಹಾಯನ ಕೋರಿ | ಶ್ರೀ ಎಸ್.ಆರ್.ಕಾಳೇಗೌಡ, ಮುಖ್ಯ ಶಿಕ್ಷಕ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅಗಿಲೆ, ಹಾಸನ ತಾ: ಇವರು ದಿನಾಂಕ: 06-12-2010ರಿಂದ 12-12-2010ರವರೆಗೆ ನಡೆಯುವ 16ನೇ ಏಷಿಯನ್ ಹಿರಿಯರ ಅಥ್ಲೆಟಿಕ್ಸ್ ಚಾಂಪಿಯನ್ ಷಿಪ್ ಸ್ಪರ್ಧೆಯಲ್ಲಿ ಭಾಗವಹಿಸಲು ಭಾರತ ತಂಡದಿಂದ ಅವರನ್ನು ಆಯ್ಕೆ ಮಾಡಿರುವುದರಿಂದ, ಅಲ್ಲಿಗೆ ಹೋಗಿ ಬರಲು ಕಾರ್ಯದರ್ಶಿ, ಕರ್ನಾಟಕ ರಾಜ್ಯ ಹಿರಿಯರ ಅಥ್ಲೆಟಿಕ್ಸ್ ಸಂಸ್ಥೆ ಇವರಿಗೆ ರೂ.30,000.00ಗಳನ್ನು 30-08-2010ರೊಳಗೆ ಇವರಿಗೆ ಕಳುಹಿಸಿಕೊಡಬೇಕಾಗಿರುವುದರಿಂದ, ಧನಸಹಾಯ ನೀಡುವಂತೆ ಕೋರಿ ಅಧ್ಯಕ್ಷರಿಗೆ ಮನವಿಯನ್ನು ನೀಡಿದ್ದು, ಮಾನ್ಯ ಅಧ್ಯಕ್ಷರು ವಿಷಯವನ್ನು ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯಲ್ಲಿ ಮಂಡಿಸುವಂತೆ ತಿಳಿಸಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು. ಶ್ರೀ ಎಸ್.ಆರ್.ಕಾಳೇಗೌಡ, ಮುಖ್ಯ ಶಿಕ್ಷಕ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅಗಿಲೆ, ಹಾಸನ ತಾ: ಇವರು ದಿನಾಂಕ: 06-12-2010ರಿಂದ 12-12-2010ರವರೆಗೆ ನಡೆಯುವ 16ನೇ ಏಷಿಯನ್ ಹಿರಿಯರ ಅಥ್ಲೆಟಿಕ್ಸ್ ಚಾಂಪಿಯನ್ ಷಿಪ್ ಸ್ಪರ್ಧೆಯಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಜಿಲ್ಲಾ ಪಂಚಾಯಿತಿ ವತಿಯಿಂದ ರೂ.5000/-(ರೂಪಾಯಿ ಐದು ಸಾವಿರ ಮಾತ್ರ)ಗಳನ್ನು ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| | | ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು | |

(ಶ್ರೀಮತಿ ಕಾಮಾಕ್ಷಿರಾಜು )

ಅಧ್ಯಕ್ಷರು

ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ

ಸ್ಥಾಯಿ ಸಮಿತಿ,ಜಿಲ್ಲಾ ಪಂಚಾಯಿತಿ, ಹಾಸನ.